# ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 259

**29 ಸೆಪ್ಟೆಂಬರ್ 2023 * ಶುಕ್ರವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ

## ಗಾಯನ



ವಿದ್ವಾನ್ ಕಲ್ಯಾಣಪುರಂ ಎಸ್. ಅರವಿಂದ



ವಿದ್ವಾನ್ ಮತ್ತೂರು ಶ್ರೀನಿಧಿ

ವಯೊಲಿನ್



ವಿದ್ವಾನ್ ಬಿ.ಎಸ್. ಪ್ರಶಾಂತ್

ಮೃದಂಗ

ಸರ್ವರಿಗೂ ಹಾರ್ದಿಕ ಸುಸ್ವಾಗತ

"ಯುವ ಕಲಾಭಾರತಿ" **ವಿದ್ವಾನ್ ಕಲ್ಯಾಣಪುರಂ ಎಸ್. ಅರವಿಂದ್**ರವರು ಇಂದು ಅತ್ಯಂತ ಬೇಡಿಕೆಯಲ್ಲಿರುವ ಕರ್ನಾಟಕ ಸಂಗೀತ ಗಾಯಕರು. ಉತ್ತಮ ಸಾಂಸ್ಕೃತಿಕ ಮತ್ತು ಧಾರ್ಮಿಕ ಪರಂಪರೆಯ ಕುಟುಂಬದಲ್ಲಿ ಜನಿಸಿದವರು. ಇವರ ಚಿಕ್ಕಪ್ಪಂದಿರು ಖ್ಯಾತ ಹರಿಕಥಾ ವಿದ್ವಾಂಸರಾದ ಕಲೈಮಾಮಣಿ ಶ್ರೀ ಕೆ.ಆರ್. ಆರಾವಮುದಾಚಾರಿಯರ್ ಮತ್ತು ಶ್ರೀ ಕೆ.ಆರ್. ವೀರರಾಘವಾಚಾರಿಯರ್‌ರವರುಗಳು. ಖ್ಯಾತ ಸಂಗೀತ ದಿಗ್ಗಜರಾದ ಶ್ರೀ ಟಿ.ಎನ್. ಶೇಷಗೋಪಾಲನ್‌ರವರ ಧರ್ಮಪತ್ನಿ ಶ್ರೀಮತಿ ಸುಧಾರವರ ಬಳಿ ನಾಲ್ಕನೆಯ ವರ್ಷದಿಂದಲೇ ಸಂಗೀತದ ಪ್ರಾರಂಭಿಕ ಮಾರ್ಗದರ್ಶನ. ಅನಂತರ ಶ್ರೀ ಶೇಷಗೋಪಾಲನ್‌ರವರ ಹಿರಿಯ ಶಿಷ್ಯ ಶ್ರೀ ಎಸ್. ಕಸ್ತೂರಿರಂಗನ್‌ರವರ ಬಳಿ ಸಂಗೀತ ಅಧ್ಯಯನ. ಕಳೆದ ಹದಿನೈದು ವರ್ಷಗಳಿಂದ ಕರ್ನಾಟಕ ಸಂಗೀತ ದಿಗ್ಗಜ, ಸಂಗೀತಕಲಾನಿಧಿ, ಪದ್ಮಭೂಷಣ ಮಧುರೈ ಟಿ.ಎನ್. ಶೇಷಗೋಪಾಲನ್‌ರವರಲ್ಲಿ ನಿರಂತರ ಸಂಗೀತಾಭ್ಯಾಸ, ಸಂಗೀತದ ಸೂಕ್ಷ್ಮತೆಗಳನ್ನು ಕರಗತ ಮಾಡಿಕೊಳ್ಳುವಲ್ಲಿ ನಿರತರು. ಆಕಾಶವಾಣಿ ಬಿ–ಹೈ ಶ್ರೇಣಿಯ ಕಲಾವಿದರು.

ಶ್ರೀ ಎಸ್. ಅರವಿಂದರವರ ವೈಶಿಷ್ಟ್ಯಗಳೆಂದರೆ ಅವರು ಸಂಗೀತ ಕಚೇರಿಗಳಲ್ಲಿ ಪ್ರಸ್ತುತ ಪಡಿಸುವ ವಿಶಿಷ್ಟ ಆಲಾಪನೆ ಮತ್ತು ಕಲ್ಪನಾಶೀಲ ನೆರವಲ್‌ಗಳು. ವಿಶ್ವದಾದ್ಯಂತ ಪ್ರವಾಸ ಮಾಡಿ ಕರ್ನಾಟಕ ಸಂಗೀತ ಮಾಧುರ್ಯವನ್ನು ಪಸರಿಸಿದ್ದಾರೆ.

ಶಾಲಾ ಶಿಕ್ಷಣದಲ್ಲಿಯೂ ಪ್ರತಿಭಾಶಾಲಿಗಳಾದ ಶ್ರೀ ಎಸ್. ಅರವಿಂದರವರು ಸಿಬಿಎಸ್ಸಿ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದ ರ್‍ಯಾಂಕ್ ಪಡೆದವರು. ಅಣ್ಣಾ ವಿಶ್ವವಿದ್ಯಾನಿಲಯದ ಕಂಪ್ಯೂಟರ್ ಸೈನ್ಸ್ ಬಿಇ ಪದವೀಧರರು. ಇದೀಗ ಸಂಪೂರ್ಣ ಸಮಯ ಹಾಗೂ ಪರಿಶ್ರಮಗಳನ್ನು ಕರ್ನಾಟಕ ಸಂಗೀತಕ್ಕಾಗಿ ಮುಡಿಪಾಗಿಟ್ಟಿದ್ದಾರೆ.

ಮದರಾಸ್ ಮ್ಯೂಸಿಕ್ ಅಕ್ಯಾಡೆಮಿಯಲ್ಲಿ 2015, 2016 ಮತ್ತು 2017ರಲ್ಲಿ ಉತ್ತಮ ಸಂಗೀತಗಾರ ಪ್ರಶಸ್ತಿ ಮತ್ತು ಷಣ್ಮುಖ ಸಂಗೀತ ಶಿರೋಮಣಿ ಪ್ರಶಸ್ತಿ; ಮುಂಬಯಿಯ

ಷಣ್ಮುಖಾನಂದ ಸಂಗೀತ ಸಭೆಯಿಂದ ಭಾರತರತ್ನ ಎಂ.ಎಸ್. ಸುಬ್ಬಲಕ್ಷ್ಮಿ ಫೆಲೋಷಿಪ್, ಎ.ಕೆ. ಪಡಗೋಪನ್ ಯುವ ಕಲಾಕಾರ್ ಪುರಸ್ಕಾರ; ನಾದ ಇನ್ಬಂ ಮತ್ತು ಭಾರತ ಕಲಾಂಜಲಿ ಸಂಸ್ಥೆಯಿಂದ ಶಿವ ಸರೋಜ ಕಲ್ಚರಲ್ ವಿದ್ಯಾರ್ಥಿವೇತನ; ಚೆನ್ನೈನ ಭಾರತ ಕಲಾಚಾರ್ ಪ್ರಶಸ್ತಿ ಮುಂತಾದ ಹಲವಾರು ಪ್ರತಿಷ್ಠಿತ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

**ವಿದ್ವಾನ್ ಮತ್ತೂರು ಶ್ರೀನಿಧಿಯವರು** ವಿದ್ವಾನ್ ಆರ್.ಆರ್. ಕೇಶವಮೂರ್ತಿಯವರಲ್ಲಿ ವಯೊಲಿನ್ ವಾದನವನ್ನು ಮತ್ತು ವಿದ್ವಾನ್ ಆರ್.ಎನ್. ತ್ಯಾಗರಾಜನ್‌ರವರಲ್ಲಿ ಶಾಸ್ತ್ರೀಯ ಸಂಗೀತವನ್ನು ಅಭ್ಯಸಿಸಿದ್ದಾರೆ. ಮದ್ರಾಸ್ ವಿಶ್ವವಿದ್ಯಾನಿಲಯದ ಎಂ. ಮ್ಯೂಸಿಕ್ ಪದವೀಧರರು. ಅನನ್ಯ ಪ್ರತಿಭಾ ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ. ಆಕಾಶವಾಣಿ ಮತ್ತು ದೂರದರ್ಶನಗಳ "ಎ" ಶ್ರೇಣಿ ಕಲಾವಿದರು. ಯೂರೋಪ್ ಹಾಗೂ ಮಧ್ಯ ಪ್ರಾಚ್ಯ ದೇಶಗಳಲ್ಲಿ ವ್ಯಾಪಕವಾಗಿ ಸಂಚರಿಸಿ ಕಾರ್ಯಕ್ರಮಗಳನ್ನು ನೀಡಿದ್ದಾರೆ.

**ವಿದ್ವಾನ್ ಬಿ.ಎಸ್. ಪ್ರಶಾಂತ್‌ರವರು** ಪ್ರಾರಂಭಿಕ ಶಿಕ್ಷಣವನ್ನು ಶ್ರೀ ಕೆ.ಎನ್. ಕೃಷ್ಣಮೂರ್ತಿ ಮತ್ತು ಶ್ರೀ ಸಿ.ಪಿ. ವ್ಯಾಸವಿಠ್ಠಲರವರುಗಳ ಬಳಿ ಪಡೆದಿರುವರು. ಪ್ರಸ್ತುತ ಖ್ಯಾತ ಮೃದಂಗ ಕಲಾವಿದರಾದ ಡಾ. ಪತ್ರಿ ಸತೀಶ್ ಕುಮಾರ್‌ರವರ ಬಳಿ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ದೇಶವಿದೇಶಗಳ ಹಲವಾರು ಪ್ರತಿಷ್ಠಿತ ವೇದಿಕೆಗಳಲ್ಲಿ ಖ್ಯಾತ ವಿದ್ವಾಂಸರುಗಳಿಗೆ ಪಕ್ಕವಾದ್ಯ ಸಹಕಾರ ನೀಡಿದ್ದಾರೆ. ಮದ್ರಾಸ್ ಮ್ಯೂಸಿಕ್ ಅಕ್ಯಾಡೆಮಿಯಿಂದ ನಾಲ್ಕು ಬಾರಿ 'ಅತ್ಯುತ್ತಮ ಮೃದಂಗ ವಾದಕ' ಪ್ರಶಸ್ತಿ ಪಡೆದಿರುವ ಹಿರಿಮೆ ಇವರದು. ಮುಂಬಯಿಯ ಷಣ್ಮುಖಾನಂದ ಫೈನ್ ಆರ್ಟ್ಸ್ ಸಂಸ್ಥೆಯ 'ಅತ್ಯುತ್ತಮ ಪಕ್ಕವಾದನಕಾರ' ಪ್ರಶಸ್ತಿ, 'ನಂದಿ ವಿದ್ಯಾವಿಶಾರದ' ಮತ್ತು 'ಸುನಾದ ವಿದ್ಯಾನಿಧಿ', ಬೆಂಗಳೂರಿನ ಪರ್ಕಸಿವ್ ಆರ್ಟ್ಸ್ ಸೆಂಟರ್‌ನ ಸಿಎಂಎಎನ್‌ಎ ಎಂಡೋಮೆಂಟ್ ಅವಾರ್ಡ್ಸ್ ಪ್ರಶಸ್ತಿಗಳು ಇವರಿಗೆ ಲಭಿಸಿರುವ ಇನ್ನಿತರ ಪುರಸ್ಕಾರಗಳು.

# ಬೆಳದಿಂಗಳ ಸಂಗೀತ 260

## 28 ಅಕ್ಟೋಬರ್ 2023



**ಬಾನ್ಸುರಿ ವಾದನ**

**ಪಂ. ಪ್ರವೀಣ್ ಗೋಡ್ಖಿಂಡಿ**



**ತಬಲ**

**ಪಂ. ಕಿರಣ್ ಗೋಡ್ಖಿಂಡಿ**

**ಫೋನ್: 0821–2548221, 2548223 * ಇಮೇಲ್: sutturmath@jssonline.org**